**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ: 17-12-2022.**

**ಪಾಟೀ ಸವಾಲು - ಎದುರುದಾರರ ಪರ ವಕೀಲರಿಂದಃ**

4. ನಾನು ಈ ಅರ್ಜಿಯನ್ನು ಅಸಲು ದಾವೆ ಸಂಖ್ಯೆಃ 665/2009 ರ ಆದೇಶದ ವಿರುದ್ಧ ಸಲ್ಲಿಸಿದ್ದೇನೆ. ದಿನಾಂಕಃ 20.10.2016 ರಂದು ನಾನು ಸದರಿ ದಾವೆಯಲ್ಲಿ ಅನಾರೋಗ್ಯದ ಕಾರಣ ಹಾಜರಾಗಲು ಸಾಧವಾಗದೇ ಆ ದಾವೆ ವಜಾ ಆಗಿತ್ತು ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆದಿದ್ದು, ಆ ದಾವೆಯ ಸುನಾವಣಾ ದಿನಾಂಕಗಳಂದು ನನಗೆ ಅನಾರೋಗ್ಯ ಇದ್ದ ಬಗ್ಗೆ ದಾಖಲೆಗಳನ್ನು ಹಾಜರುಮಾಡಿದ್ದೀನಾ? ಎಂದರೆ ನನಗೆ ಅನಾರೋಗ್ಯ ಇರಲಿಲ್ಲ, ಮನೆಯಲ್ಲಿ ತುಂಬಾ ತೊಂದರೆಗಳು ಸಂಭವಿಸಿದ್ದವು. ನನಗೆ ಮನೆಯಲ್ಲಿ ತೊಂದರೆಗಳು ಇರುವುದರಿಂದ ದಾವೆಯ ಸುನಾವಣೆಗೆ ಬರಲು ಆಗುವುದಿಲ್ಲ ಎಂದು ನನ್ನ ವಕೀಲರಿಗೆ ಹೇಳಿದ್ದುಂಟೇ? ಎಂದರೆ ಹೇಳಿರಲಿಲ್ಲ. ಸದರಿ ದಿನಾಂಕಗಳಂದು ಅಸಲು ದಾವೆಯಲ್ಲಿ ಹಾಜರಾಗಲು ನನಗೆ ಸಾಧ್ಯವಾಗುವುದಿಲ್ಲ ಆದ್ದರಿಂದ ಅರ್ಜಿ ಸಲ್ಲಿಸಿ ಕಾಲಾವಕಾಶ ಪಡೆಯಿರಿ ಎಂದು ನನ್ನ ವಕೀಲರಿಗೆ ತಿಳಿಸಿದ್ದುಂಟೇ? ಎಂದರೆ ತಿಳಿಸಿರಲಿಲ್ಲ. ದಾವೆ ಯಾವ ದಿನಾಂಕದಂದು ವಜಾ ಆಯಿತು ಎಂಬುದನ್ನು ನಾನು ಇನ್ನೂ ತಿಳಿದುಕೊಂಡಿಲ್ಲ.

5. ಆ ದಾವೆಯನ್ನು ನನಗೆ ದಾನ ಪತ್ರದ ಮೂಲಕ ಆಸ್ತಿ ಬಂದಿದ್ದರಿಂದ ಅದರ ಕುರಿತಂತೆ ಸಲ್ಲಿಸಿದ್ದೆ. ಆ ದಾವೆಯನ್ನು ನಾನು ಮೂರು ಜನ ಪ್ರತಿವಾದಿಗಳ ವಿರುದ್ಧ ಸಲ್ಲಿಸಿದ್ದೆ ಎಂದರೆ ಸರಿ. ಓ.ಎಸ್.ನಂ.665/2009 ರಲ್ಲಿ ನಾನು ವೆಂಕಟಮ್ಮ ಮೃತಪಟ್ಟಿದ್ದಾರೆಂದು ಆಕೆಯ ಮಕ್ಕಳನ್ನು ಪ್ರತಿವಾದಿಗಳಾಗಿ ಮಾಡಿ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಈ ಅರ್ಜಿಯನ್ನು ಕೇವಲ ಆ ದಾವೆಯ ಒಬ್ಬ ಪ್ರತಿವಾದಿಯ ವಿರುದ್ಧ ಮಾತ್ರ ಸಲ್ಲಿಸಿದ್ದೇನೆ ಎಂದರೆ ಸಾಕ್ಷಿಯು ಎಲ್ಲರಿಗೂ ನೋಟಿಸ್ ಕಳುಹಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಎದುರುದಾರ ಒಬ್ಬನ ವಿರುದ್ಧ ಮಾತ್ರ ಅರ್ಜಿ ಸಲ್ಲಿಸಿ ಆತನಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನಗೆ ಯಾವುದೇ ತೊಂದರೆ ಆಗದೇ ಇದ್ದರೂ ಕೋರ್ಟಿಗೆ ಬರದೇ ವಜಾ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲಾ.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**